ಎನ್. ಜಗನ್ನಾಥ ಪ್ರಕಾಶ್

# ‘ಹಳ್ಳಿ ಹುಡುಗಿ’ ಚಿಂದೋಡಿ ಲೀಲಾ



ಐದನೆಯ ವಯಸ್ಸಿಗೆ ಬಣ್ಣ ಹಚ್ಚಿ, ಹದಿನಾಲ್ಕರ ಹೊತ್ತಿಗೆ ನಾಯಕಿಯಾಗಿ ಹೆಸರು ಮಾಡಿ, ವೃತ್ತಿ ರಂಗಭೂಮಿ ಹಾಗೂ ಚಲನಚಿತ್ರರಂಗದಲ್ಲೂ ಹೆಜ್ಜೆ ಗುರುತು ಮೂಡಿಸಿದ ಬಹುಮುಖ ಪ್ರತಿಭೆಯ ಕಲಾವಿದೆ ಚಿಂದೋಡಿ ಲೀಲಾ.

ಅಣ್ಣಿಗೇರಿ ಶಾಂತವೀರಪ್ಪ ವೃತ್ತಿ ರಂಗಭೂಮಿಯ ಹೆಸರಾಂತ ಕಲಾವಿದ. ಗಾಯನ – ನಟನೆಯಲ್ಲಿ ಅದ್ವಿತೀಯ. ಮೈಸೂರು ಮಹಾರಾಜರಿಂದ ಮೆಚ್ಚುಗೆ ಪಡೆದು ಗಾನ ಗಂದರ್ಭ ಎನ್ನಿಸಿಕೊಂಡಿದ್ದ ಶಾಂತವೀರಪ್ಪನವರ ಕೊನೆಯ ಮಗಳೇ ಲೀಲಾ (ಈರಮ್ಮ).

ಕರಿ ಬಸವೇಶ್ವರ ನಾಟಕ ಮಂಡಲಿಯನ್ನು ಅಣ್ಣಿಗೇರಿ ಶಾಂತವೀರಪ್ಪನವರು ನಾಟಕ ಮಂಡಲಿಯನ್ನು ನಿರ್ವಹಿಸಲು ತಮ್ಮ ಕುಟುಂಬ ಸದಸ್ಯರನ್ನೆ ಅಣಿಗೊಳಿಸಿದ್ದರು. ನಾಟಕ ಮಂಡಲಿಯಲ್ಲಿಯೇ ಹುಟ್ಟಿದ ಲೀಲಾ ಅವರು ಆ ಕ್ಷೇತ್ರದಲ್ಲೇ ಉಸಿರಾಡುತ್ತಿದ್ದುದು ಸಹಜ.

ಕುಟುಂಬ ಸದಸ್ಯರೊಂದಿಗೆ ನಾಟಕ ಮಂಡಲಿಯಲ್ಲಿಯೇ ಇರುತ್ತಿದ್ದ ಲೀಲಾ ಅವರು ಸಣ್ಣ ಪುಟ್ಟ ಪಾತ್ರಗಳಲ್ಲಿ ಅಭಿನಯಿಸುವುದು ಸಾಮಾನ್ಯವಾಗಿತ್ತು. ಕಂಪೆನಿಯ ಹಲವು ನಾಟಕಗಳಲ್ಲಿ ನಾಯಕಿಯಾಗಿ ಪ್ರೇಕ್ಷಕರ ಪ್ರಶಂಸೆ ಪಡೆದ ಲೀಲಾ ಶಾಸ್ತ್ರೀಯವಾಗಿ ನೃತ್ಯಾಭ್ಯಾಸ ಮಾಡಿದರು. ಇವರ ಪ್ರಧಾನ ಅಭಿನಯದ ‘ಹಳ್ಳಿ ಹುಡುಗಿ’ ವೃತ್ತಿ ರಂಗಭೂಮಿಯಲ್ಲಿ ಹೊಸ ಸಂಚಲನವನ್ನೇ ಮೂಡಿಸಿತು. ಇದೇ ಸಂದರ್ಭದಲ್ಲಿ ಪ್ರಸಿದ್ಧ ನಿರ್ದೇಶಕ – ನಿರ್ಮಾಪಕ ಬಿ.ಆರ್. ಪಂತಲು ತಮ್ಮ ‘ಕಿತ್ತೂರು ಚೆನ್ನಮ್ಮ’ ಚಿತ್ರದಲ್ಲಿ ಲೀಲಾ ಅವರಿಗೆ ಪ್ರಧಾನ ಪಾತ್ರ ನಿರ್ವಹಣೆಗೆ ಅವಕಾಶ ಕೊಟ್ಟರು. ಅಲ್ಲಿಯೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು ಲೀಲಾ.

ಆ ವೇಳೆಗೆ ಅಣ್ಣಿಗೇರಿ ಶಾಂತವೀರಪ್ಪ ಸ್ಥಾಪಿಸಿದ್ದ ‘ಕರಿ ಬವಸವೇಶ್ವರ ನಾಟಕ ಮಂಡಲಿ’ ಹಲವು ಏಳು ಬೀಳುಗಳನ್ನು ಕಂಡಿತ್ತು. ವೈರಾಗ್ಯದ ಕಡೆಗೆ ಮುಖ ಮಾಡಿದ್ದ ಶಾಂತವೀರಪ್ಪನವರು ಕಂಪೆನಿ ಕಡೆ ಹೆಚ್ಚು ಆಸಕ್ತಿ ತೋರದ್ದರಿಂದ ಅದು ಮುಚ್ಚಿತ್ತು. ಮಕ್ಕಳು